ಓಂ ಶಾಂತಿ, ಬಾಪ್‌ದಾದಾ, ರಿವೈಸ್ ಕೋರ್ಸ್/ ಅವ್ಯಕ್ತ ಮುರಳಿ 28-02-2003.

# *ಸೇವೆಯ ಜೊತೆ-ಜೊತೆಗೆ ಈಗ ಸಂಪನ್ನರಾಗುವ ಪ್ಲಾನ್ ಮಾಡಿ. ಕರ್ಮಾತೀತರಾಗುವಂತಹ ಗುಂಗಿನಲ್ಲಿ ತೊಡಗಿರಿ.*

(सेवा के साथ-साथ अब सम्पन्न बनने का प्लैन बनाओ, कर्मातीत बनने की धुन लगाओ)

ಶಿವಪರಮಾತ್ಮ ಈ ಭೂಮಿಯ ಮೇಲೆ ಅವತರಿಸಿ ಜ್ಞಾನ, ಯೋಗಗಳಿಂದ  ಧರ್ಮಸ್ಥಾಪನೆಯನ್ನು ಮಾಡುತ್ತಿದ್ದಾರೆ.

ಮುರಳಿಯನ್ನು ಓದಬೇಕಾದರೆ ಆತ್ಮಿಕ ಸ್ಥಿತಿಯಲ್ಲಿದ್ದು ತಂದೆಯೊಂದಿಗೆ ಶಿಕ್ಷಕನ ಸಂಬಂಧವನ್ನು ಜೋಡಿಸಿ ಈಶ್ವರೀಯ ವಿದ್ಯಾರ್ಥಿಯ ಸ್ಥಿತಿಯಲ್ಲಿದ್ದು ಮಹಾವಾಕ್ಯಗಳನ್ನು ಆತ್ಮಕ್ಕೆ ಅನ್ವಯಿಸಿಕೊಂಡು ಓದಿದಾಗ ಮುರಳಿ ಅರ್ಥವಾಗುತ್ತದೆ. ಅದಕ್ಕಾಗಿ ನಾವು ಮಾಡಬೇಕಾಗಿರುವ ಸಂಕಲ್ಪಗಳು.

• ನಾನಾತ್ಮ ನಿರಾಕಾರ ಜ್ಯೋತಿರ್ಬಿಂದು ಸ್ವರೂಪ ಶಿವಪರಮಾತ್ಮನನ್ನ ತಂದೆ.

• ನಾನು ಈಶ್ವರೀಯ ವಿದ್ಯಾರ್ಥಿ, ಶಿವ ಪರಮಾತ್ಮ ನನಗೆ ಟೀಚರ್ ಅಥವಾ ಶಿಕ್ಷಕ.

• ಶಿವಪರಮಾತ್ಮ ನನಗೆ ಸದ್ಗುರು, ನಾನು ಮಾಸ್ಟರ್ ಸದ್ಗುರು.

• ಶಿವಪರಮಾತ್ಮ ನನಗೆ ಜೀವನ ಸಂಗಾತಿ, ನಾನು ಶಿವ ಪರಮಾತ್ಮನಿಗೆ ಜೀವನ ಸಂಗಾತಿ.

ಇಂದು ಶಿವತಂದೆ ತಮ್ಮ ಸಾಲಿಗ್ರಾಮ ಮಕ್ಕಳ ಜೊತೆ ತಮ್ಮ ಹಾಗು ಮಕ್ಕಳ ಅವತರಣೆಯ ಜಯಂತಿಯನ್ನು ಆಚರಿಸಲು ಬಂದಿದ್ದಾರೆ. ಈ ಅವತರಣೆಯ ಜಯಂತಿಯು ಎಷ್ಟೊಂದು ಅದ್ಭುತವಾಗಿದೆ. ನಾಲ್ಕು ಕಡೆ ಎಲ್ಲಾ ಮಕ್ಕಳು ತಂದೆಯ ಹಾಗೂ ತಮ್ಮ ಜಯಂತಿಯನ್ನು ಆಚರಿಸುವುದಕೋಸ್ಕರ ಓಡೋಡಿ ಬಂದಿದ್ದೀರಿ ತಂದೆ ಮತ್ತು ಮಕ್ಕಳ ಜಯಂತಿ ಅರ್ಥಾತ್ ಅವತರಣೆಯ ದಿವಸವು ಒಂದೇ ಆಗಿದೆ ಒಂದೇ ದಿವಸ ತಂದೆ ಮತ್ತು ಮಕ್ಕಳ ಜನ್ಮದಿನ ಎಂಬುದು ಅದ್ಭುತವಾಗಿದೆ. ಹಾಗಾದರೆ ತಾವೆಲ್ಲಾ ಸಾಲಿಗ್ರಾಮ ಮಕ್ಕಳು ತಂದೆಗೆ ಶುಭಾಶಯಗಳನ್ನು ಕೊಡಲು ಬಂದಿದ್ದೀರಾ ಅಥವಾ ತಂದೆಯಿಂದ ಶುಭಾಶಯಗಳು ಪಡೆಯಲು ಬಂದಿದ್ದೀರಾ? ಕೊಡಲೂ ಬಂದಿದ್ದೀರಿ ಹಾಗೂ ತೆಗೆದುಕೊಳ್ಳಲೂ ಬಂದಿದ್ದೀರಿ. ಜೊತೆ ಜೊತೆಯ ಚಿಹ್ನೆ ಏನೆಂದರೆ, ತಾವು ಮಕ್ಕಳ ಹಾಗೂ ತಂದೆಯ ನಡುವೆ ಪರಸ್ಪರ ತುಂಬಾ ತುಂಬಾ ತುಂಬಾ ಸ್ನೇಹವಿದೆ. ಆದಕಾರಣ ಜನ್ಮವು ಸಹ ಜೊತೆಜೊತೆ ಇದೆ ಮತ್ತು ಇಡೀ ಜನ್ಮ ಕಂಬೈನ್ಡ್, ಜೊತೆಯಲ್ಲಿಯೇ

ಇರುತ್ತೀರಿ. ಇಷ್ಟೊಂದು ಪ್ರೀತಿಯನ್ನು ನೋಡಿದ್ದೀರಾ? ಕರ್ತವ್ಯವೂ ತಂದೆ ಮತ್ತು ಮಕ್ಕಳದು ಒಂದೇ ವಿಶ್ವ ಪರಿವರ್ತನೆ ಮಾಡುವ ಕರ್ತವ್ಯವಾಗಿದೆ. ಮತ್ತು ಪ್ರಷ್ಣೆಯೂ ಏನಾಗಿದೆ? ಆದೇನೆಂದರೆ ಪರಮಧಾಮ, ಮಧುರ ಮನೆಗೂ ಸಹ ಜೊತೆ ಜೊತೆಯಲ್ಲಿಯೇ ಹೋಗುತ್ತೇವೆ ಎಂತಲೋ ಅಥವಾ ಹಿಂದೆ ಹೋಗುತ್ತೇವೆ ಎಂತಲೋ? ಜೊತೆ-ಜೊತೆಗೆ ಹೋಗಬೇಕಾಗಿದೆ ಅಲ್ಲವೇ! ಹಾಗಾದರೆ ಇಂತಹ ಸ್ನೇಹ ನಿಮ್ಮ ಮತ್ತು ತಂದೆಯದಾಗಿದೆ. ತಂದೆಯೊಬ್ಬರೇ ಏನೂ ಮಾಡಲು ಆಗುವುದಿಲ್ಲ. ಮಕ್ಕಳು ಸಹ ಒಬ್ಬರೇ ಏನು ಮಾಡಲಾಗುವುದಿಲ್ಲ. ಮಾಡಲಾಗುತ್ತದೆಯೇ? ಕೇವಲ ತಂದೆಯ ವಿನಃ ಏನು ಮಾಡುವುದಕ್ಕೆ ಆಗುತ್ತದೆ ಹಾಗೂ ತಂದೆಯು ಸಹ ಏನೂ ಮಾಡಲಾಗುವುದಿಲ್ಲ. ಅದಕ್ಕೆ ತಾವು ಬ್ರಾಹ್ಮಣರನ್ನು ರಚಿಸಲು ಬ್ರಹ್ಮಾ ತಂದೆಯ ಆಧಾರವನ್ನು ತೆಗೆದುಕೊಂಡರು. ಬ್ರಾಹ್ಮಣರ ಹೊರತು ತಂದೆಯು ಏನೂ ಮಾಡಲಾಗುವುದಿಲ್ಲ? ಇದಕ್ಕಾಗಿ ಈ ಅಲೌಕಿಕ ಅವತರಣೆಯ ಜನ್ಮದಲ್ಲಿ ತಂದೆಯು ಮಕ್ಕಳಿಗೆ ಹಾಗೂ ಮಕ್ಕಳು ತಂದೆಗೆ ಪದಮಾ ಪದಮದಷ್ಟು ಶುಭಾಶಯಗಳನ್ನು ಕೊಡುತ್ತಿದ್ದಾರೆ. ತಾವು ತಂದೆಗೆ ಕೊಡುತ್ತಿದ್ದೀರಿ, ತಂದೆಯೂ ತಮಗೆ ಕೊಡುತ್ತಿದ್ದಾರೆ. ಅಮೃತವೇಳೆಯಿಂದ ಹಿಡಿದು ಮಕ್ಕಳ ಶುಭಾಷಯಗಳ ಪತ್ರ(ಕಾರ್ಡ್), ಹೃದಯದ ಮಧುರ-ಮಧುರ ಗೀತೆಗಳು ಬಾಬಾರವರಿಗೆ ಸಿಕ್ಕಿದೆ. ಈಗಲೂ ಸಹ ಬಾಪ್‌ದಾದಾ ನೋಡುತ್ತಿದ್ದಾರೆ ನಾಲ್ಕೂ ಕಡೆಯ ದೇಶವಿದೇಶದ ಮಕ್ಕಳು ಸೂಕ್ಷ್ಮದಲ್ಲಿ ಬಾಪ್‌ದಾದಾರವರಿಗೆ ಶುಭಾಷಯಗಳನ್ನು ಕೊಡುತ್ತಿದ್ದಾರೆ. ಅದೆಲ್ಲವೂ ತಲುಪುತ್ತಿದೆ. ಮಕ್ಕಳ ಬಳಿ ಕೂಗು ತಲುಪುತ್ತಿದೆ ಹಾಗೂ ಮಕ್ಕಳ ಹೃದಯದ ಕೂಗು ತಂದೆಗೆ ತಲುಪುತ್ತಿದೆ. ನಾಲ್ಕೂ ಕಡೆಯ ಮಕ್ಕಳು ಖುಷಿಯಲ್ಲಿ ಉಯ್ಯಾಲೆ ಆಡುತ್ತಿದ್ದಾರೆ. ವಾಹ್! ಬಾಬಾ ವಾಹ್! ವಾಹ್ ನಾವು ಸಾಲಿಗ್ರಾಮ ಆತ್ಮರೂ! ವಾಹ್! ವಾಹ್! ಎಂಬ ಗೀತೆಯನ್ನು ಹಾಡುತ್ತಿದ್ದಾರೆ. ತಮ್ಮ ಈ ಜನ್ಮದಿನದ ಸ್ಮೃತಿ ಚಿಹ್ನೆಯನ್ನು ದ್ವಾಪರದಿಂದ ಇಲ್ಲಿಯವರೆಗೂ ಭಕ್ತರೂ ಸಹ ಆಚರಿಸುತ್ತಿದ್ದಾರೆ. ಭಕ್ತರೂ ಸಹ ಭಾವನೆಯಲ್ಲಿ ಕಡಿಮೆ ಇಲ್ಲ. ಆದರೆ ಭಕ್ತರು ಮಕ್ಕಳಲ್ಲ. ಅವರು ಪ್ರತಿ ವರ್ಷ ಆಚರಿಸುತ್ತಾರೆ ಹಾಗೂ ತಾವು ಇಡೀ ಕಲ್ಪದಲ್ಲಿ ಒಮ್ಮೆ ಅವತರಣೆಯ ಮಹತ್ವವನ್ನು ಆಚರಿಸುತ್ತೀರಿ. ಅವರು ಪ್ರತಿ ವರ್ಷ ವ್ರತವನ್ನು ಇಡುತ್ತಾರೆ. ವ್ರತವೂ ಇಡುತ್ತಾರೆ ಹಾಗೂ ವ್ರತ ತೆಗೆದುಕೊಳ್ಳುತ್ತಾರೆ. ತಾವು ಒಂದು ಸಾರಿ ವ್ರತ ತೆಗೆದುಕೊಂಡು ಬಿಡುತ್ತೀರಿ. ಕಾಪಿ ತಮ್ಮದೇ ಆಗಿದೆ. ತಮ್ಮ ಮಹತ್ವ ಹಾಗೂ ಅವರ ಸ್ಮೃತಿ ಚಿಹ್ನೆಯ ಮಹತ್ವದಲ್ಲಿ ಅಂತರವಿದೆ. ಅವರು ಸಹ ಪವಿತ್ರತೆಯ ವ್ರತ ತೆಗೆದುಕೊಳ್ಳುತ್ತಾರೆ. ಆದರೆ ಪ್ರತಿವರ್ಷ ಒಂದು ದಿನಕ್ಕೋಸ್ಕರ ವ್ರತ ತೆಗೆದುಕೊಳ್ಳುತ್ತಾರೆ. ತಾವೆಲ್ಲರೂ ಸಹ ಜನ್ಮ ತೆಗೆದುಕೊಂಡ ತಕ್ಷಣ ಒಂದು ಸಾರಿ ಪವಿತ್ರತೆಯ ವ್ರತ ತೆಗೆದುಕೊಂಡಿದ್ದೀರಿ ಅಲ್ಲವೇ! ತೆಗೆದುಕೊಂಡಿದ್ದೀರಾ ಅಥವಾ ತೆಗೆದುಕೊಳ್ಳಬೇಕಾ? ತೆಗೆದುಕೊಂಡು ಬಿಟ್ಟಿದ್ದೀರಲ್ಲವೇ. ಒಂದು ಸಾರಿ ತೆಗೆದುಕೊಳ್ಳುತ್ತೀರಿ ಅವರು ವರ್ಷ ವರ್ಷ ತೆಗೆದುಕೊಳ್ಳುತ್ತಾರೆ. ಎಲ್ಲರೂ ತೆಗೆದುಕೊಂಡಿದ್ದೀರಲ್ಲವೇ? ಕೇವಲ ಬ್ರಹ್ಮಚರ್ಯವಲ್ಲ, ಸಂಪೂರ್ಣ ಪವಿತ್ರತೆಯ ವ್ರತ ತೆಗೆದುಕೊಂಡಿದ್ದೀರಲ್ಲವೇ. ಕೇವಲ ಬ್ರಹ್ಮಚರ್ಯವಲ್ಲ ಜೊತೆಯಲ್ಲಿ ಇನ್ನು ನಾಲ್ಕೂ ಇದೆ. ಈ ನಾಲ್ಕರ ವ್ರತ ತೆಗೆದುಕೊಂಡಿದ್ದೀರೋ ಅಥವಾ ಕೇವಲ ಒಂದರದಷ್ಟೆ ತೆಗೆದುಕೊಂಡಿದ್ದೀರಾ? ಚೆಕ್ ಮಾಡಿಕೊಳ್ಳಿರಿ. ಕ್ರೋಧ ಮಾಡಿಕೊಳ್ಳಲು ಅವಕಾಶವಿದೆ ಅಲ್ಲವೇ? ಅಥವಾ ಇಲ್ಲವೋ? ಸ್ವಲ್ಪ ಸ್ವಲ್ಪ ಕ್ರೋದ ಮಾಡಿಕೊಳ್ಳಬೇಕಲ್ಲಾ! ಎನ್ನುತ್ತೀರಾ? ಹೇಳಿ ಪಾಂಡವರೇ ಕ್ರೋದ ಮಾಡಿಕೊಳ್ಳುವ ಹಾಗಿಲ್ಲ ಅಲ್ಲವೇ? ಮಾಡಿಕೊಳ್ಳಬೇಕಾಗುತ್ತದೆಯೇ! ಬಾಪ್‌ದಾದಾ ನೋಡಿದರು ಕ್ರೋಧ ಹಾಗೂ ಜೊತೆಗಾರರೆಲ್ಲರನ್ನೂ, ಆ ಮಹಾ ಭೂತದ ತ್ಯಾಗ ಮಾಡಿದ್ದೀರಿ ಆದರೆ ಹೇಗೆ ಮಾತೆಯರಿಗೆ, ಪ್ರವೃತಿಯವರಿಗೆ, ದೊಡ್ಡ ಮಕ್ಕಳ ಜೊತೆ ಇಷ್ಟು ಪ್ರೀತಿ

ಇರುವುದಿಲ್ಲ ಮೋಹವೂ ಇರುವುದಿಲ್ಲ ಆದರೆ ಮೊಮ್ಮಕ್ಕಳು ಮರಿಮಕ್ಕಳ ಜೊತೆ ತುಂಬಾ ಮೋಹವಿರುತ್ತದೆ. ಚಿಕ್ಕ-ಚಿಕ್ಕ ಮಕ್ಕಳೊಂದಿಗೆ ಬಹಳ ಪ್ರೀತಿ ಇರುತ್ತದೆ. ಹಾಗೆಯೇ ಬಾಪ್‌ದಾದಾ ನೋಡಿದರು ಮಕ್ಕಳೆಲ್ಲರಿಗೂ ಸಹ ಪಂಚ ವಿಕಾರಗಳೆಂಬ ಮಹಾಭೂತಗಳ ಮಹಾ ರೂಪಗಳೊಂದಿಗೆ ಪ್ರೀತಿಯು ಕಡಿಮೆಯಾಗಿಬಿಟ್ಟಿದೆ ಆದರೆ ಆ ವಿಕಾರಗಳ ಪುತ್ರರು ಅರ್ಥಾತ್ ಚಿಕ್ಕ ಚಿಕ್ಕ ಅಂಶ ಮಾತ್ರವಾಗಿ, ವಂಶ ಮಾತ್ರವಾಗಿ ಇರುವವರೊಂದಿಗೆ ಈಗಿನವರೆಗೂ ಸಹ ಸ್ವಲ್ಪ ಸ್ವಲ್ಪ ಪ್ರೀತಿ ಇದೆ. ಪ್ರೀತಿ ಇದೆ ಅಲ್ಲವೇ! ಕೆಲವೊಮ್ಮೆ ಪ್ರೀತಿ ಬಂದು ಬಿಡುತ್ತದೆಯೇ? ಮಾತೆಯರೇ, ಡಬಲ್ ವಿದೇಶಿಯರೇ ಕ್ರೋದ ಬರುವುದಿಲ್ಲವೇ? ಕೆಲವರು ತುಂಬಾ ತುಂಬಾ ಚತುರತೆಯ ಮಾತುಗಳನ್ನು ಆಡುತ್ತಾರೆ. ಏನು ಹೇಳುತ್ತಾರೆಂದು ಹೇಳುವುದೇ? ಹೇಳಿಬಿಡಲೇ? ಒಂದುವೇಳೆ ಹೇಳಿದರೆ ಇಂದು ಬಿಡಬೇಕಾಗುತ್ತದೆ. ಅದಕ್ಕೆ ತಯಾರಿದ್ದೀರಾ? ಬಿಡುವುದಕ್ಕೆ ತಯಾರಿದ್ದೀರಾ? ಅಥವಾ ಕೇವಲ ಫೈಲ್‌ನಲ್ಲಿ ಪೇಪರ್ ಜಮಾಮಾಡುತ್ತೀರಾ? ಹೇಗೆ ಪ್ರತಿ ವರ್ಷ ಮಾಡುತ್ತೀರೋ ಪ್ರತಿಜ್ಞೆಯ ಫೈಲ್ ತಂದೆಯ ಬಳಿ ಬಹಳ ಬಹಳ ದೊಡ್ಡದು ಆಗಿಬಿಟ್ಟಿದೆ ಈಗಲೂ ಸಹ ಈ ರೀತಿಯಂತೂ ಮಾಡುವುದಿಲ್ಲ ತಾನೇ? ಒಂದು ಪ್ರತಿಜ್ಞೆಯ ಪೇಪರ್ ಫೈಲ್‌ನಲ್ಲಿ ಜಮಾ ಮಾಡಿಬಿಡೋಣ ಎನ್ನುವಂತೆ ಇಲ್ಲ ತಾನೇ? ಫೈನಲ್ ಮಾಡುತ್ತೀರಾ ಅಥವಾ ಫೈಲ್ ಹಾಕುತ್ತೀರಾ? ಏನು ಮಾಡುತ್ತೀರಿ? ಹೇಳಿ ಶಿಕ್ಷಕಿಯರೇ ಏನು ಮಾಡುತ್ತೀರಿ? ಫೈನಲ್, ಫೈನಲ್! ಕೈಯೆತ್ತಿ ಹಾಗೆಯೇ ಪ್ರತಿಜ್ಞೆ ಮಾಡಬೇಡಿ, ಬಾಪ್‌ದಾದಾ ನಂತರ ಸ್ವಲ್ಪ ರೂಪವನ್ನು ಧಾರಣೆ ಮಾಡುತ್ತಾರೆ. ಸರಿ ತಾನೇ, ಡಬಲ್ ವಿದೇಶಿಯರೇ ಫೈನಲ್ ಮಾಡುತ್ತೀರಾ? ಫೈನಲ್? ಕೈಯೆತ್ತಿ ಯಾರು ಫೈನಲ್ ಮಾಡುತ್ತೀರಿ. ಟಿ.ವಿಯಲ್ಲಿ ತೋರಿಸಿ, ಕೈ ದೊಡ್ಡದಾಗಿ ಎತ್ತಿ ಚಿಕ್ಕದಾಗಿ ಅಲ್ಲ. ತ್ರೇತಾಯುಗಿಗಳಂತೆ ಅಲ್ಲ. ಒಳ್ಳೆಯದು. ಸರಿಯಲ್ಲವೇ. ಕೇಳಿ. ತಂದೆ ಹಾಗೂ ಮಕ್ಕಳ ಮಾತುಗಳೂ ಏನಾಗಿರುತ್ತವೆ? ಬಾಪ್‌ದಾದಾ ಮುಗುಳ್ನಗೆ ನಗುತ್ತಿರುತ್ತಾರೆ. ಬಾಬಾ ಕೇಳುತ್ತಾರೆ ಕ್ರೋಧ ಏಕೆ ಮಾಡಿಕೊಂಡಿರಿ? ಆಗ ನೀವು ಹೇಳುತ್ತೀರಿ ನಾನು ಮಾಡಿಕೊಳ್ಳಲಿಲ್ಲ ಆದರೆ ಮಾಡಿಸಿಬಿಟ್ಟರು. ಮಾಡಿಕೊಂಡಿಲ್ಲ ನನಗೆ ಮಾಡಿಸಿಬಿಟ್ಟರು. ಈಗ ಬಾಬಾ ಏನು ಹೇಳಬೇಕು? ನಂತರ ಒಂದುವೇಳೆ ತಾವು ಸಹ ಇದ್ದಿದ್ದರೆ ತಮಗೂ ಬಂದುಬಿಡುತ್ತಿತ್ತು ಎಂದು ಹೇಳುತ್ತಾರೆ. ಹೀಗೆ ಮಧುರ, ಮಧುರ ಮಾತುಗಳನ್ನು ಆಡುತ್ತೀರಲ್ಲವೇ! ನಂತರ ಹೇಳುತ್ತೀರಿ ನಿರಾಕಾರದಿಂದ ಸಾಕಾರ ತನುವನ್ನು ತೆಗೆದುಕೊಂಡು ನೋಡಿ ಎಂದು ಹೇಳಿ! ಈ ರೀತಿಯ ಮಧುರ ಮಕ್ಕಳಿಗೆ ಬಾಬಾ ಏನು ಹೇಳುವುದು! ಆದರೂ ಸಹ ಬಾಬಾರವರಿಗೆ ದಯಾಹೃದಯಿಯಾಗಬೇಕಾಗುತ್ತದೆ. ಹೇಳುತ್ತಾರೆ ಒಳ್ಳೆಯದು. ಈಗ ಕ್ಷಮಿಸುತ್ತಿದ್ದೇನೆ ಆದರೆ ಮುಂದೆ ಮಾಡಬೇಡಿ. ಆದರೆ ಪ್ರತ್ಯುತ್ತರ ಚೆನ್ನಾಗಿ ಕೊಡುತ್ತೀರಿ.

ಪವಿತ್ರತೆಯು ಬ್ರಾಹ್ಮಣರ ಎಲ್ಲದಕ್ಕಿಂತ ದೊಡ್ಡ ಶೃಂಗಾರವಾಗಿದೆ ಆದ್ದರಿಂದ ತಮ್ಮೆಲ್ಲರ ಚಿತ್ರಗಳನ್ನು ಎಷ್ಟೊಂದು ಶೃಂಗಾರ ಮಾಡುತ್ತಾರೆ. ಈ ಪವಿತ್ರತೆಯ ಸ್ಮಾರಕ ಶೃಂಗಾರವಾಗಿದೆ. ಪವಿತ್ರತೆ, ಸಂಪೂರ್ಣ ಪವಿತ್ರತೆ, ನಡೆಸುವಂತಹ ಪವಿತ್ರತೆ ಅಲ್ಲ. ಸಂಪೂರ್ಣ ಪವಿತ್ರತೆ ತಾವು ಬ್ರಾಹ್ಮಣ ಜೀವನದ ಎಲ್ಲದಕ್ಕಿಂತ ದೊಡ್ಡ ಆಸ್ತಿಯಾಗಿದೆ. ಇದೇ ರಾಯಲ್ಟಿ, ವ್ಯಕ್ತಿತ್ವವಾಗಿದೆ. ಆದ್ದರಿಂದ ಭಕ್ತ ಜನರು ಸಹ ಒಂದು ದಿನ ಪವಿತ್ರ ವ್ರತವನ್ನು ಇಟ್ಟುಕೊಳ್ಳುತ್ತಾರೆ. ಇದನ್ನು ಅವರು ಅನುಸರಣೆ ಮಾಡುತ್ತಾರೆ. ಎರಡನೆಯದಾಗಿ ಆಹಾರ-ಪಾನಿಯದ ವ್ರತ ತೆಗೆದುಕೊಳ್ಳುತ್ತಾರೆ. ಆಹಾರ-ಪಾನಿಯಗಳ ವ್ರತವೂ ಸಹ ಅವಶ್ಯಕತೆ ಇದೆ. ಏಕೆ? ತಾವು ಬ್ರಾಹ್ಮಣರೂ ಸಹ ಆಹಾರ -ಪಾನಿಯದ ವ್ರತವನ್ನು ಪಕ್ಕಾ ಮಾಡಿಕೊಂಡಿದ್ದೀರಿ ತಾನೇ! ಯಾವಾಗ ಎಲ್ಲರಿಂದ ಫಾರ್ಮ್ ತುಂಬಿಸಿಕೊಳ್ಳುತ್ತೀರಿ. ಮಧುಬನದಲ್ಲಿ ಬರುವ ಫಾರ್ಮ್

ನ್ನು ತುಂಬಿಸುತ್ತೀರಲ್ಲವೇ, ಆಹಾರ-ಪಾನಿಯ ಶುದ್ಧವಿದೆಯಾ ಎಂದು ತುಂಬಿಸುತ್ತೀರಲ್ಲವೇ? ಅಂದರೆ ಆಹಾರ-ಪಾನಿಯದ ವ್ರತವು ಪಕ್ಕಾಯಿದೆಯಾ? ಪಕ್ಕಾಯಿದೆಯೋ ಕೆಲವು ಬಾರಿ ಕಚ್ಚಾ ಆಗುತ್ತದೆಯೋ? ಡಬಲ್ ವಿದೇಶಿಗಳಿಗೆ ಡಬಲ್ ಪಕ್ಕಾ ತಾನೇ! ಡಬಲ್ ಪಕ್ಕಾ ತಾನೇ? ಅಥವಾ ಕೆಲವು ಬಾರಿ ಸುಸ್ತಾದಾಗ ಹೇಳುತ್ತೀರಾ ಪರವಾಗಿಲ್ಲ ಇಂದು ಸ್ವಲ್ಪ ತಿಂದರಾಯಿತು ಎಂದು. ಸ್ವಲ್ಪ ಸಡಿಲ ಮಾಡಿಕೊಳ್ಳುತ್ತೀರಾ. ಇಲ್ಲ ತಾನೇ, ಆಹಾರ, ಪಾನಿಯ ಪಕ್ಕಾ ತಾನೇ? ಆದ್ದರಿಂದ ಭಕ್ತ ಜನರೂ ಸಹ ಆಹಾರ-ಪಾನಿಯಗಳ ವ್ರತವನ್ನು ಮಾಡುತ್ತಾರೆ. ಮೂರನೆಯ ವ್ರತವಾಗಿದೆ ಜಾಗರಣೆ-ರಾತ್ರಿ ಎಚ್ಚರವಾಗಿ ಇರುತ್ತಾರಲ್ಲವೇ! ತಾವು ಬ್ರಾಹ್ಮಣರೂ ಸಹ ಅಜ್ಞಾನದ ನಿದ್ರೆಯಿಂದ ಜಾಗೃತರಾಗುವ ವ್ರತವನ್ನು ಮಾಡುತ್ತೀರಿ ಮಧ್ಯ-ಮಧ್ಯದಲ್ಲಿ ಆಜ್ಞಾನದ ನಿದ್ರೆ ಬರುವುದಿಲ್ಲ ತಾನೆ' ಭಕ್ತ ಜನರು ತಮ್ಮನ್ನು ಅನುಸರಣೆ ಮಾಡುತ್ತಾರೆ. ತಾವು ಅಷ್ಟು ಪಕ್ಕಾ ಇದ್ದೀರಿ ಆದ್ದರಿಂದ ನಿಮ್ಮನ್ನು ಅನುಸರಣೆ ಮಾಡುತ್ತಾರೆ. ಎಂದೂ ಕೂಡ ಆಜ್ಞಾನ ಅಂದರೆ ನಿಶಕ್ತತೆಯ, ಹುಡುಗಾಟಿಕೆ ತನದ, ಅಲಸ್ಯದ ನಿದ್ರೆ ಬರಬಾರದು. ಅಥವಾ ಸ್ವಲ್ಪ ಸ್ವಲ್ಪ ತೂಕಡಿಕೆ ಬಂದರೆ ಪರವಾಗಿಲ್ಲವೇ? ತೂಕಡಿಕೆ ಬರುತ್ತದೆಯೇ? ಹಾಗೆ ಆಮೃತವೇಳೆ ಸಹ ಕೆಲವರು ತೂಕಡಿಸುತ್ತಾರೆ. ಆದರೆ ಇದನ್ನು ಯೋಚನೆ ಮಾಡಿ ನಮ್ಮ ಸ್ಮೃತಿಚಿಹ್ನೆಯಲ್ಲಿ ಭಕ್ತ ಜನರು ಏನೇನು ಅನುಸರಣೆ ಮಾಡುತ್ತಿದ್ದಾರೆ! ಅವರು ಅಷ್ಟೊಂದು ಪಕ್ಕಾ ಇರುತ್ತಾರೆ. ಏನೇ ಆದರೂ ವ್ರತವನ್ನು ಬಿಡುವುದಿಲ್ಲ. ಇಂದಿನ ದಿನ ಭಕ್ತರು ಅಹಾರ-ಪಾನಿಯ ವ್ರತವನ್ನು ಇಟ್ಟುಕೊಳ್ಳುತ್ತಾರೆ ಮತ್ತು ನೀವು ಇಂದು ಏನು ಮಾಡುತ್ತೀರಿ? ಪಿಕ್ನಿಕ್ ಮಾಡುತ್ತೀರಿ? ಅವರು ವ್ರತವನ್ನು ಇಟ್ಟುಕೊಳ್ಳುತ್ತಾರೆ. ನೀವು ಪಿಕ್ನಿಕ್ ಮಾಡುತ್ತೀರಿ. ಪಿಕ್ನಿಕ್ ಮಾಡುತ್ತೀರಿ ಏಕೆಂದರೆ ನೀವು ಜನ್ಮದಿನದಿಂದಲೇ ವ್ರತವನ್ನು ತೆಗೆದುಕೊಂಡಿದ್ದೀರಿ ಆದ್ದರಿಂದ ಪಿಕ್ನಿಕ್ ಮಾಡುತ್ತೀರಿ.

ಬಾಪ್‌ದಾದಾರವರು ಈಗ ಮಕ್ಕಳಿಂದ ಏನನ್ನು ಬಯಸುತ್ತಾರೆ? ಗೊತ್ತಿದೆಯೇ? ಸಂಕಲ್ಪಗಳನ್ನು ತುಂಬಾ ಚೆನ್ನಾಗಿ ಮಾಡುತ್ತೀರಿ. ಎಷ್ಟು ಒಳ್ಳೆಯ ಸಂಕಲ್ಪಗಳನ್ನು ಮಾಡುತ್ತೀರಿ ಎಂದರೆ ಅದನ್ನು ಕೇಳಿ ಬಾಪ್‌ದಾದಾ ಖುಷಿ ಪಡುತ್ತಾರೆ. ಸಂಕಲ್ಪ ಮಾಡುತ್ತಿರಿ ಆದರೆ ನಂತರ ಏನು ಆಗುತ್ತದೆ? ಸಂಕಲ್ಪ ನಿಶಕ್ತವಾಗುತ್ತಿದೆ ಏಕೆ? ಬದಲಾಗಬೇಕೆಂದುಕೊಳ್ಳುತ್ತಿದ್ದೀರಿ ಏಕೆಂದರೆ ತಂದೆಯ ಮೇಲೆ ಬಹಳ ಪ್ರೀತಿ ಇದೆ. ತಂದೆಗೂ ಬಾಪ್‌ದಾದಾರವರ ಮೇಲೆ ಎಲ್ಲಾ ಮಕ್ಕಳಿಗೂ ಮನಸ್ಸಿನ ಪ್ರೀತಿ ಇದೆ ಮತ್ತು ಪ್ರೀತಿಯಲ್ಲಿ 100% ಗಿಂತಲೂ ಜಾಸ್ತಿ ಎಂದು ಕೈಯನ್ನು ಮೇಲೆ ಎತ್ತುತ್ತಾರೆ ಎಂದು ತಿಳಿದಿದೆ ಮತ್ತು ತಂದೆಯು ಒಪ್ಪಿಕೊಳ್ಳುತ್ತಾರೆ. ಆದರೆ ಏನು? ಆದರೆ, ಇದೆಯಾ ಅಥವಾ ಇಲ್ಲವೇ? ಆದರೆ... ಎಂಬುದು ಬರುತ್ತದೆಯೇ, ಇಲ್ಲವೇ ಇಲ್ಲ ಎನ್ನುತ್ತಿಲ್ಲ ಎಂದರೆ ಹೌದು ಎಂದ ಹಾಗೆ ತಾನೇ?

ಬಾಪ್‌ದಾದಾ ಒಂದು ವಿಷಯವನ್ನು ನೋಟ್ ಮಾಡಿದರು. **ಮೆಜಾರಿಟಿ ಪ್ರತಿಜ್ಞೆ ಬಲಹೀನವಾಗಲು ಒಂದೇ ಕಾರಣ, ಒಂದೇ ಮಾತು, ಆ ಒಂದು ಮಾತು ಏನೆಂದು ಯೋಚಿಸಿರಿ. ಆ ಒಂದು ಮಾತು ಏನು ಎಂದು ಟೀಚರ್ಸ್ ಹೇಳಿರಿ. ಪಾಂಡವರು ಹೇಳಿರಿ. ಸ್ಮೃತಿ ಬಂದಿದೆಯಲ್ಲವೇ, ಆ ಒಂದೇ ಮಾತು ಏನೆಂದರೆ ನಾನು, ನಾನು ಎಂಬ ಮಾತು. ಅಭಿಮಾನ ರೂಪದಲ್ಲಿಯೂ ಬರುತ್ತಿದೆ, ಬಲಹೀನವಾಗಿ ಮಾಡುವುದರಲ್ಲಿಯೂ ನಾನು ಎಂಬ ಮಾತು ಬರುತ್ತಿದೆ. ನಾನು ಏನನ್ನಾದರೆ ಹೇಳಿದ್ದೇನೆಯೋ, ಯಾವುದನ್ನಾದರೆ ತಿಳಿದಿದ್ದೇನೆಯೋ ಅದೇ ನಿಜ, ಅದೇ ಆಗಬೇಕು, ಹೀಗೆ ತಿಳಿಯುವುದೇ ಅಭಿಮಾನದ**

**ನಾನು ಎಂದುಕೊಳ್ಳುವುದು. ನಾನು ಎಂಬುದು ಪೂರ್ಣವಾಗದಿದ್ದರೆ ಹಿಂತಿರುಗಿ ಅದೇ ಮನಸ್ಸಿನ ಬಲಹೀನತೆಯ ರೂಪದಲ್ಲಿ ಬರುತ್ತದೆ. ನಾನು ಮಾಡಲಾಗುವುದಿಲ್ಲ, ನಾನು ನಡೆಯಲಾಗುವುದಿಲ್ಲ, ಹೀಗೆ ಒಂದು ದೇಹಾಬಿಮಾನದ ನಾನು ಎಂಬುದು ಬದಲಾಗಿ ನಾನು ಎಂಬ ಮಾತೇ ಸ್ವಮಾನವನ್ನು ಸಹ ಸ್ಮೃತಿ ಮಾಡಿಸುತ್ತದೆ ಮತ್ತು ನಾನು ಎಂಬ ಮಾತೇ ದೇಹಾಭಿಮಾನದಲ್ಲಿಯೂ ಸಹ ತರುತ್ತದೆ ನಾನು ಎಂಬುದು ಮನಸ್ಸನ್ನು ಬಲಹೀನವನ್ನಾಗಿಯೂ ಮಾಡುತ್ತದೆ. ಮತ್ತು ಮನಸ್ಸನ್ನು ಖುಷಿಯಿಂದಲೂ ಇರುವಂತೆ ಮಾಡುತ್ತದೆ. ಅಭಿಮಾನದ ನಾನು ಎಂಬುವ ಮಾತಿನ ಗುರುತುಗಳು ಯಾವ ರೀತಿ ಇರುತ್ತವೆ ಎಂದರೆ- ಅವರು ಅವಮಾನವನ್ನು ಸಹಿಸಲಾಗುವುದಿಲ್ಲ. ಅಭಿಮಾನ ಎಂಬುವುದು ಅವಮಾನವನ್ನು ಸಹಿಸಲು ಬಿಡುವುದಿಲ್ಲ. ಇದು ಸರಿಯಾದದಲ್ಲ, ಸ್ವಲ್ಪ ನಿರ್ಮಾಣವಾಗಿ ಇರಿ ಎಂದು ಯಾರಾದರೂ ಹೇಳಿದರು ಎಂದಿಟ್ಟುಕೊಳ್ಳಿ. ಅವರಿಗೆ ಅದು ಅವಮಾನವೆಂದು ಅನಿಸುತ್ತದೆ.** ಅಭಿಮಾನ ಇರುವವರ ಗುರುತು ಇದೇ.

ಬಾಪ್‌ದಾದಾರವರು ವತನದಲ್ಲಿ ಮುಗುಳ್ನಗುತ್ತಿದ್ದರು- ಈ ಮಕ್ಕಳು ಅಲ್ಲಿ ಇಲ್ಲಿ ಭಾಷಣ ಮಾಡುತ್ತೀರಲ್ಲವೆ, ಶಿವರಾತ್ರಿಯಲ್ಲಿ ಈಗ ಬಹಳ ಭಾಷಣ ಮಾಡುತ್ತೀರಿ. ಇದರಲ್ಲಿ ಹೇಳುತ್ತೀರಿ ಬಾಪ್‌ದಾದಾರವರಿಗೆ ಮಕ್ಕಳ ಪಾಯಿಂಟ್ ನೆನಪಿಗೆ ಬಂದಿತು. ಅದರಲ್ಲಿ ಹೇಳಲಾಗುತ್ತದೆ. ಶಿವರಾತ್ರಿಯಲ್ಲಿ ಕುರಿಯನ್ನು ಬಲಿಕೊಡಲಾಗುತ್ತದೆ. ಅದು ಮೇ.. ಮೇ (ನಾನು ನಾನು) ಎಂದು ತುಂಬಾ ಅನ್ನುತ್ತದೆ. ಕುರಿ ನಾನು ನಾನು ಅನ್ನುತ್ತದೆ ಅಲ್ಲವೆ. ಅಂದಾಗ ಈ ರೀತಿ ಶಿವರಾತ್ರಿಯಲ್ಲಿ ಈ ಬಲಿ ಕೊಡಬೇಕಾಗಿದೆ. ಬಾಬಾ ಈ ಭಾಷಣವನ್ನು ಕೇಳಿ ಕೇಳಿ ಮುಗುಳ್ನಗುತ್ತಿದ್ದರು. ಈ ನಾನು ಎಂಬುವುದನ್ನು ತಾವು ಸಹ ಬಿಟ್ಟುಬಿಡಿ. ಸಮರ್ಪಣೆ ಮಾಡುತ್ತೀರಾ? ಮಾಡುತ್ತೀರಾ, ಪಾಂಡವರು ಮಾಡುತ್ತೀರಾ? ಡಬಲ್ ಫಾರಿನರ್ಸ್ ಮಾಡಲು ಸಾಧ್ಯವೇ? ಪೂರ್ಣ ಸಮರ್ಪಣೆಯೇ ಅಥವಾ ಸಮರ್ಪಣೆಯೇ? ಪೂರ್ಣ ಸಮರ್ಪಣೆ. ಇಂದು ಬಾಪ್‌ದಾದಾರವರು ಧ್ವಜವನ್ನು ಹಾರಿಸುವ ಸಮಯದಲ್ಲಿ ಮಾಮೂಲಾಗಿ ಪ್ರತಿಜ್ಞೆಯನ್ನು ಮಾಡಿಸುವುದಿಲ್ಲ. ಇಂದು ಪ್ರತಿಜ್ಞೆಯನ್ನು ಮಾಡಿ, ಫೈಲ್ನಲ್ಲಿ ಒಂದು ಕಾಗದವನ್ನು ಜಮಾ ಮಾಡುವ ರೀತಿ ಪ್ರತಿಜ್ಞೆ ಮಾಡಿಸುವುದಿಲ್ಲ. ದಾದಿಯರು ಏನು ಯೋಚನೆ ಮಾಡುತ್ತಿದ್ದೀರಿ. ಇಂದೂ ಸಹ ಇದೇ ರೀತಿ ಪ್ರತಿಜ್ಞೆ ಮಾಡಿಸುತ್ತೀರಾ? ಫೈನಲ್ ಮಾಡುತ್ತೀರಾ ಅಥವಾ ಫೈಲ್‌ನಲ್ಲಿ ಜಮಾ ಮಾಡುತ್ತೀರಾ? ಹೇಳಿ ಧೈರ್ಯವಿದೆಯೇ? (ಫೈನಲ್ ಮಾಡಿಸುತ್ತೇವೆ) ಧೈರ್ಯವಿದೆಯಾ? ಕೈಯನ್ನು ಯಾರೂ ಅಲುಗಾಡಿಸುತ್ತಿಲ್ಲ. ಕೇಳುವುದರಲ್ಲಿ ಮಗ್ನರಾಗಿದ್ದೀರಾ. ನಾಳೆಯಂತೂ ಏನೂ ಆಗುವುದಿಲ್ಲಾ ತಾನೆ? ನಾಳೆ ಮಾಯೆ ಬರುತ್ತದೆ, ಸುತ್ತು ಹಾಕುವುದಕ್ಕೆ ಬರುತ್ತದೆ. ಮಾಯೆಗೂ ಸಹ ನಿಮ್ಮ ಮೇಲೆ ಪ್ರೀತಿ ಇದೆಯಲ್ಲವೇ ಏಕೆಂದರೆ ವರ್ತಮಾನದಲ್ಲಿ ಎಲ್ಲರೂ ವಿಜೃಂಭಣೆಯಿಂದ ಸೇವೆಯ ಪ್ಲಾನನ್ನು ತಯಾರು ಮಾಡುತ್ತಿದ್ದೀರಲ್ಲವೆ. ಸೇವೆಯನ್ನು ವಿಜೃಂಭಣೆಯಿಂದ ಮಾಡುವುದು ಎಂದರೆ ಸಂಪೂರ್ಣ ಸಮಾಪ್ತಿಯ ಸಮಯವನ್ನು ಸಮೀಪ ತರುವುದು ಎಂದು ತಿಳಿದುಕೊಳ್ಳಬೇಡಿ. ಭಾಷಣ ಮಾಡಿ ಬರುವುದೆಂದು ಭಾವಿಸಬೇಡಿರಿ ಆದರೆ ಸಮಯವನ್ನು ಸಮೀಪ ತರುವುದು. ಸೇವೆಯನ್ನು ಚೆನ್ನಾಗಿ ಮಾಡುತ್ತಿದ್ದೀರಿ. ಬಾಪ್‌ದಾದಾರವರು ಖುಷಿಯಾಗಿದ್ದಾರೆ. ಆದರೆ ಬಾಪ್‌ದಾದಾರವರು ನೋಡುತ್ತಿದ್ದಾರೆ ಸಮಯವು ಸಮೀಪ ಬರುತ್ತಿದೆ. ತಾವುಗಳೇ ಸಮಯವನ್ನು ಸಮೀಪ ತರುವಂತಹವರು. ಹಾಗೆಯೇ ಒಂದು ಲಕ್ಷ ಒಂದುವರೆ ಲಕ್ಷ ಒಟ್ಟಿಗೆ ಸೇರಿಸಿಲ್ಲ. ಇದು ಸಮಯದ ಸಮೀಪತೆಯಾಗಿದೆ. ಇಂದು ಗುಜರಾತಿನವರು ಮಾಡಿದ್ದೀರಿ. ಬಾಂಬೆಯವರು ಮಾಡಲಿದ್ದೀರಿ ಮತ್ತು ಇನ್ನೂ ಕೆಲವರು ಮಾಡಲಿದ್ದೀರಿ. ಭಲೆ ಒಂದು ಲಕ್ಷ ಇಲ್ಲದಿದ್ದರೂ ಐವತ್ತು ಸಾವಿರ ಆದರೂ ಸರಿ ಸಂದೇಶವನ್ನು ಕೊಡುತ್ತಿದ್ದೀರಿ. ಅಂದರೆ ಸಂದೇಶದ ಜೊತೆ ಜೊತೆಗೆ ಸಂಪನ್ನತೆಗೆ

ತಯಾರಿ ಆಗಿದೆಯೇ? ವಿನಾಶವನ್ನು ಕರೆಯುತ್ತಿದ್ದೀರಿ ಅಂದರೆ ತಯಾರಿ ಆಗಿದ್ದೀರಾ? ದಾದಿಯವರು ಪ್ರಶ್ನೆ ಕೇಳಿದ್ದರು ಬೇಗ ಬೇಗ ಪ್ರತ್ಯಕ್ಷತೆ ಆಗಲು ಈಗ ಅಂತಹ ಯಾವ ಪ್ಲಾನನ್ನು ತಯಾರು ಮಾಡಿದ್ದೀರಿ? ಬಾಪ್‌ದಾದಾರವರು ಹೇಳುತ್ತಿದ್ದಾರೆ ಪ್ರತ್ಯಕ್ಷತೆ ಸೆಕೆಂಡಿನ ಮಾತಾಗಿದೆ ಆದರೆ ಪ್ರತ್ಯಕ್ಷತೆಗಿಂತ ಮೊದಲು ಬಾಪ್‌ದಾದಾರವರು ಕೇಳುತ್ತಿದ್ದಾರೆ ಸ್ಥಾಪನೆ ಮಾಡುವಂತಹವರು ಎವರೆಡಿ ಆಗಿದ್ದೀರಾ? ಪರದೆಯನ್ನು ತೆರೆಯಬಹುದಾ? ಕೆಲವರು ಕಿವಿಯಲ್ಲಿ ದಿನಾಂಕವನ್ನು ಹೇಳಿ ಹೇಗೆ ಈಗ ದಿನಾಂಕವನ್ನು ನಿಗದಿ ಮಾಡುತ್ತೀರಲ್ಲವೇ. ಈ ತಿಂಗಳಿನ ಒಳಗೆ ಸಂದೇಶ ಕೊಡುವುದಕ್ಕೆ ಎಲ್ಲರೂ ಎವರೆಡಿ ಆಗಿದ್ದೀರಾ, ಕಡಿಮೆ ಎಂದರೆ ಹದಿನಾರು ಸಾವಿರ ಎವರೆಡಿ ಆಗಬೇಕು. 9ಲಕ್ಷ ಬಿಡಿ 15 ಸಾವಿರ ತಯಾರಿ ಆಗಿದೆಯೆ? ತಯಾರಿ ಆಗಿದೆಯೇ? ಚಪ್ಪಾಳೆಯನ್ನು ತಟ್ಟಿ. ಸುಮ್ಮನೆ ಹೌದು ಎಂದು ಹೇಳಬಾರದು. ಎವರೆಡಿ ಆಗಿ ಆಗ ಬಾಪ್‌ದಾದಾರವರು ಪ್ರೇರಣೆ ಕೊಡುತ್ತಾರೆ. ಚಪ್ಪಾಳೆ ತಟ್ಟುತ್ತಾರೆ. ಪ್ರಕೃತಿಯು ತನ್ನ ಕಾರ್ಯವನ್ನು ಶುರುಮಾಡುತ್ತದೆ. ವಿಜ್ಞಾನದವರು ತಮ್ಮ ಕಾರ್ಯವನ್ನು ಪ್ರಾರಂಭಮಾಡುತ್ತಾರೆ. ಆಲಸ್ಯವೆನಿದೆ? ಎಲ್ಲರೂ ರೆಡಿಯಾಗಿದ್ದೀರಾ. 15 ಸಾವಿರ ತಯಾರಾಗಿದ್ದಾರಾ? ಆಗುತ್ತಾರೆ (ತಮಗೆ ಎಲ್ಲವೂ ಗೊತ್ತಿದೆ) ಈ ಉತ್ತರ ಮುಕ್ತಗೊಳಿಸುವಂತಹದು. 16 ಸಾವಿರ ಎವರೆಡಿ ಎಂಬ ಫಲಿತಾಂಶವು ಬರಬೇಕು. ಸಂಪೂರ್ಣ ಪವಿತ್ರತೆಯಿಂದ ಸಂಪನ್ನರಾಗಿರಬೇಕು. ಬಾಪ್‌ದಾದಾರವರಿಗೆ ಚಪ್ಪಾಳೆ ತಟ್ಟುವುದರಲ್ಲಿ ಯಾವ ನಿಧಾನವಿಲ್ಲ. ದಿನಾಂಕವನ್ನು ಹೇಳಿ (ನೀವೇ ಹೇಳಿರಿ ಎಂದು ಹೇಳಿದರು) ಎಲ್ಲರನ್ನೂ ಕೇಳಿ. ಆಗಲೇಬೇಕು ಆದರೆ ಯಾವುದನ್ನು ತಿಳಿಸಲಾಗಿದೆ ನಾನು ಎನ್ನುವ ಒಂದು ಶಬ್ದದ ಸಂಪೂರ್ಣ ಪರಿವರ್ತನೆ ಆಗಬೇಕು ಆಗ ತಂದೆಯ ಜೊತೆ ಹೋಗಬೇಕು. ಇಲ್ಲವೆಂದರೆ ಹಿಂದೆ ಹಿಂದೆ ಹೋಗಬೇಕಾಗುತ್ತದೆ. ಆದ್ದರಿಂದ ಬಾಪ್‌ದಾದಾರವರಾದರೆ ಈಗ ಬಾಗಿಲು ತೆರೆಯುವುದಿಲ್ಲ ಏಕೆಂದರೆ ಜೊತೆಗೆ ಹೋಗಬೇಕು.

ಬ್ರಹ್ಮಾ ತಂದೆ ಎಲ್ಲಾ ಮಕ್ಕಳನ್ನು ಕೇಳುತ್ತಿದ್ದಾರೆ ಮನೆಯ ಬಾಗಿಲು ತೆರೆಯುವ ದಿನಾಂಕ ಹೇಳಿ, ಬಾಗಿಲು ತೆರೆಯಬೇಕಲ್ಲವೆ! ಮನೆಗೆ ಹೋಗಬೇಕಲ್ಲವೆ ! ಇಂದು ಆಚರಣೆ ಮಾಡುವುದು ಎಂದರೆ ತಯಾರಾಗುವುದು. ಕೇವಲ ಕೇಕ್ ಕಟ್ ಮಾಡುವುದಲ್ಲ ಆದರೆ ನಾನು ಎನ್ನುವುದನ್ನು ಸಮಾಪ್ತಿ ಮಾಡಬೇಕು. ಯೋಚನೆ ಮಾಡಿದ್ದೀರಾ ಅಥವಾ ಮಾಡುತ್ತಿದ್ದೀರಾ? ಏಕೆಂದರೆ ಬಾಪ್‌ದಾದಾರವರ ಬಳಿ ಅಮೃತವೇಳೆಯಲ್ಲಿ ಎಲ್ಲರ ತುಂಬಾ ವಿಭಿನ್ನ ಸಂಕಲ್ಪಗಳು ತಲುಪುತ್ತವೆ. ಪರಸ್ಪರದಲ್ಲಿ ಸಲಹೆಗಳನ್ನು ತೆಗೆದುಕೊಂಡು ತಂದೆಗೆ ದಿನಾಂಕವನ್ನು ತಿಳಿಸಿ. ಎಲ್ಲಿಯವರೆಗೆ ದಿನಾಂಕವನ್ನು ನಿಗದಿಪಡಿಸುವುದಿಲ್ಲವೋ ಅಲ್ಲಿಯವರೆಗೆ ಯಾವ ಕಾರ್ಯವೂ ಆಗುವುದಿಲ್ಲ. ಮೊದಲು ಮಹಾರಥಿಗಳು ದಿನಾಂಕವನ್ನು ನಿಗಧಿ ಪಡಿಸಿ ನಂತರ ಎಲ್ಲರೂ ಅನುಸರಣೆ ಮಾಡುತ್ತಾರೆ. ಅನುಸರಣೆ ಮಾಡುವಂತಹವರು ತಯಾರಿದ್ದಾರೆ ಮತ್ತು ತಮ್ಮೆಲ್ಲರ ಧೈರ್ಯದಿಂದ ಇನ್ನೂ ಸಹ ಬಲ ಸಿಗುತ್ತದೆ. ಹೇಗಾದರೆ ನೋಡಿ ಈಗ ಉತ್ಸಾಹ ಉಲ್ಲಾಸವನ್ನು ಕೊಟ್ಟಿದ್ದೀರಿ ಅಂದರೆ ತಯಾರಾಗಿದ್ದಾರೆ ಅಲ್ಲವೆ! ಹಾಗೇಯೇ ಸಂಪನ್ನ ಆಗುವುದಕ್ಕೆ ಯೋಜನೆ ಮಾಡಿ ಕರ್ಮಾತೀತ ಆಗಲೇಬೇಕು ಎಂದು ಅದೇ ಗುಂಗಿನಲ್ಲಿರಿ. ಏನೇ ಆಗಲಿ ಆಗಲೇಬೇಕು. ಮಾಡಲೇಬೇಕು, ಆಗೇ ಆಗುತ್ತದೆ. ವಿಜ್ಞಾನಿಗಳ ಕೂಗು. ವಿನಾಶ ಮಾಡುವಂತಹವರ ಕೂಗು ತಂದೆಯ ಕಿವಿಗಳ ಬಳಿ ಬರುತ್ತದೆ. ಅವರು ಸಹ ಹೇಳುತ್ತಾರೆ ಏಕೆ ತಡೆಯುತ್ತಿದ್ದೀರಿ ಎಂದು. ಅಡ್ವಾನ್ಸ್ ಪಾರ್ಟಿಯವರು ಸಹ ದಿನಾಂಕ ನಿಗದಿ ಮಾಡಿ ಎಂದು ಹೇಳುತ್ತಿದ್ದಾರೆ.

ಬ್ರಹ್ಮಾಬಾಬಾರವರು ಸಹ ಹೇಳುತ್ತಾರೆ ದಿನಾಂಕ ನಿಗಧಿ ಮಾಡಿ ಎಂದು. ಅಂದಾಗ ಈ ಮೀಟಿಂಗ್ ಮಾಡಿ. ಬಾಕಿ ಸೇವೆ ಏನು ಮಾಡುತ್ತಿದ್ದೀರೊ ಅದರಲ್ಲಿ ಬಾಪ್‌ದಾದಾ ಸಂತುಷ್ಟವಾಗಿದ್ದಾರೆ. ಪ್ರತೀ ವಿದೇಶದವರು ಮಾಡುತ್ತಿದ್ದಾರೆ. ಭಾರತದಲ್ಲೂ ಎಲ್ಲಾ ವಲಯದವರೂ ಮಾಡುತ್ತಿದ್ದೀರಿ. ಪ್ರವೃತ್ತಿಯವರೂ ಮಾಡುತ್ತಿದ್ದೀರಿ ಎಲ್ಲರೂ ಮಾಡುತ್ತಿದ್ದೀರಿ ಇದಕ್ಕೆ ಶುಭಾಷಯಗಳು ಸೇವೆಗೂ ಶುಭಾಷಯಗಳು. ಈಗ ಈ ಚಮತ್ಕಾರ ಮಾಡಿ ತೋರಿಸಿ. ದಾದಿಯರಿಗೆ ವಿಶೇಷವಾಗಿ ಹೇಳುತ್ತಿದ್ದೇನೆ ಹಿರಿಯ ಸಹೋದರರಿಗೂ ಹೇಳುತ್ತಿದ್ದೇನೆ. ಈಗ ಮುಂದಿನ ಶಿವರಾತ್ರಿಯಲ್ಲಿ ಕಮಾಲ್ ಹಾಗೂ ಧಮಾಲ್ ಎರಡೂ ಜೊತೆ ಜೊತೆಯಲ್ಲಿ ಇರಲಿ, ಸರಿ ತಾನೇ. ಮುಂದಿನ ಸಾಲಿನ ಟೀಚರ್ಸ್ ಸರಿ ತಾನೇ? ಮೀಟಿಂಗ್ ಮಾಡುತ್ತೀರಲ್ಲವೇ? ಬಾಪ್‌ದಾದಾರವರಿಗೆ ಈಗ ದಿನಾಂಕ ಬೇಕು ಹಾಗೆಯೇ ಆಗಿ ಬಿಡುವುದಿಲ್ಲ. ಮಾಡುತ್ತಿದ್ದೇವೆ ಈ ರೀತಿ ಆಗುವುದಿಲ್ಲ. ಇದು ಬಹಳ ಆಗಿ ಬಿಟ್ಟಿತು. ಮೊದಲು ಮಕ್ಕಳು ದಿನಾಂಕ ಕೊಡಲಿ ನಂತರ ಬಾಬಾ ಫೈನಲ್ ಮಾಡುತ್ತಾರೆ. ಬಾಪ್‌ದಾದಾ ಹೇಳುತ್ತಾರೆ ಮುಂದಿನ ಶಿವರಾತ್ರಿಯಲ್ಲಿ ಕಮಾಲ್ ಹಾಗೂ ಧಮಾಲ್ ಎರಡೂ ಜೊತೆ ಇರಲಿ. ಈಗ ತಯಾರಿ ಮಾಡಿ. ಟೀಚರ್ಸ್ ಒಪ್ಪುತ್ತೀರಾ? ಡಬಲ್ ವಿದೇಶಿಯರೇ ಒಪ್ಪುತ್ತೀರಾ? ಮೊದಲನೇಯ ಸಾಲಿನವರು ಒಪ್ಪುತ್ತೀರಾ? ಪಾಂಡವರು ಒಪ್ಪುತ್ತೀರಾ? (ಆಯಿತು) ಶುಭಾಷಯಗಳು, ಬಹಳ ದುಃಖಿತರು ಇದ್ದಾರೆ. ಬಾಪ್‌ದಾದಾರವರಿಗೆ ಈಗ ಇಷ್ಟು ದುಃಖವನ್ನು ನೋಡಲು ಆಗುತ್ತಿಲ್ಲ. ಮೊದಲು ತಾವು ಶಕ್ತಿಯರಿಗೆ, ದೇವತಾರೂಪ ಪಾಂಡವರಿಗೆ ದಯೆ ಬರಬೇಕು. ಎಷ್ಟು ಕೂಗುತ್ತಿದ್ದಾರೆ.. ಅವರ ಕೂಗಿನ ಧ್ವನಿ ತಮ್ಮ ಕಿವಿಗಳಲ್ಲಿ ಮೊಳಗಬೇಕು. ಸಮಯದ ಕೂಗು ಎಂಬ ಕಾರ್ಯಕ್ರಮ ಮಾಡುತ್ತೀರಲವೇ! ಈಗ ಭಕ್ತರ ಕೂಗನ್ನು ಕೇಳಿರಿ. ಸೇವೆಯ ನಂಬರ್ ಚೆನ್ನಾಗಿದೆ. ಈ ಸರ್ಟಿಫಿಕೇಟ್ ಅಂತೂ ಬಾಪ್‌ದಾದಾ ಸಹ ಕೊಡುತ್ತಿದ್ದಾರೆ. ಉತ್ಸಾಹ ಉಲ್ಲಾಸಗಳು ಚೆನ್ನಾಗಿವೆ. ಶುಭಾಶಯಗಳು. ಈಗ ಸ್ವಲ್ಪ ಅವರ ಕರೆಯನ್ನು ಕೇಳಿದರೆ ಸರಿ ಹೋಗುತ್ತದೆ. ಪ್ರಾಣದಿಂದ, ಬಾಯಾರಿಕೆಯಿಂದ ಕರೆಯುತ್ತಿದ್ದಾರೆ. ವಿಜ್ಞಾನದವರು ಸಹ ಬಹಳ ಕೂಗುತ್ತಿದ್ದಾರೆ ಯಾವಾಗ ಮಾಡಬೇಕು, ಯಾವಾಗ ಮಾಡಬೇಕು, ಯಾವಾಗ ಮಾಡಬೇಕು ಎನ್ನುತ್ತಾ ಕರೆಯುತ್ತಿದ್ದಾರೆ. ಭಲೆ ಇಂದು ಕೇಕ್ ಅನ್ನು ಕಟ್ ಮಾಡಿಕೊಳ್ಳಿ. ಆದರೆ ನಾಳೆಯಿಂದ ಕರೆಯನ್ನು ಕೇಳಿರಿ. ಆಚರಿಸಿಕೊಳ್ಳುವುದು ಎಂಬುವುದು ಸಂಗಮಯುಗದ ಪದ್ಧತಿ, ಒಂದು ಕಡೆ, ಆಚರಿಸಿಕೊಳ್ಳಬೇಕು ಇನ್ನೊಂದು ಕಡೆ ತಯಾರಾಗಬೇಕು ಒಳ್ಳೆಯದು ಏನು ಕೇಳಿಸಿಕೊಂಡಿದ್ದೀರಿ?

ತಮ್ಮ ಗೀತೆಯು- ದುಃಖಿಗಳ ಮೇಲೆ ಸ್ವಲ್ಪ ದಯೆ ತೋರಿಸಿ... ನಿಮ್ಮ ಹೊರತು ಬೇರೆ ಯಾರು ದಯೆಯನ್ನು ತೋರಿಸಲಾಗುವುದಿಲ್ಲ. ಆದ್ದರಿಂದ ಈಗ ಸಮಯಾನುಸಾರ ಮಾಸ್ಟರ್ ದಯಾಸಾಗರರಾಗಿರಿ ಸ್ವಯಂನ ಮೇಲೆಯೂ ದಯೆ ಮತ್ತು ಇತರಾತ್ಮರ ಪ್ರತಿಯು ದಯೆಯನ್ನು ತೋರಿಸಿ. ಲೈಟ್ ಹೌಸ್ ಆಗಿ ಭಿನ್ನ-ಭಿನ್ನ ಲೈಟ್ ನ ಕಿರಣಗಳನ್ನು ಸಿಂಪಡಿಸಿರಿ. ವಿಶ್ವದಲ್ಲಿರುವ ಅಪ್ರಾಪ್ತಿ ಆತ್ಮರಿಗೆ ಪ್ರಾಪ್ತಿಯ ಕಿರಣಗಳನ್ನು ಕೊಡಿ. ಒಳ್ಳೆಯದು.

**ಸರ್ವ ಸಾಕ್ಷಾತ್ ತಂದೆ ಮೂರ್ತಿಯ ಶ್ರೇಷ್ಠ ಅತ್ಮರಿಗೆ, ಸದಾ ಉತ್ಸಾಹ ಉಲ್ಲಾಸದಲ್ಲಿ ಇರುವಂತಹ ತಂದೆಯ ಸಮೀಪ ಅತ್ಮರಿಗೆ, ಸದಾ ಸರ್ವ ಹೆಜ್ಜೆಯಲ್ಲಿ ತಂದೆಯ ಸಮಾನ ಇರುವಂತಹ ಮಕ್ಕಳಿಗೆ, ನಾಲ್ಕೂ ಕಡೆಯ ಬ್ರಾಹ್ಮಣ ಜನ್ಮದ ಶುಭಾಷಯಗಳಿಗೆ ಪಾತ್ರರಾಗಿರುವಂತಹ ಮಕ್ಕಳಿಗೆ, ಸದಾ ಏಕಾಗ್ರತೆಯ ಶಕ್ತಿ ಸಂಪನ್ನ ಆತ್ಮರಿಗೆ ಬಾಪ್‌ದಾದಾರವರ ನೆನಪು, ಪ್ರೀತಿ ಹಾಗೂ ಪದಮಾ ಪದಮ ಗುಣ ಜನ್ಮ ದಿನದ ಶುಭಾಷಯಗಳು ಹಾಗೂ ನಮಸ್ತೆ.**

67ನೇ ತ್ರಿಮೂರ್ತಿ ಶಿವ ಜಯಂತಿಯ ಸಂದರ್ಭವಾಗಿ ಪ್ರಿಯ ಅವ್ಯಕ್ತ ಬಾಪ್‌ದಾದಾ ತಮ್ಮ ಹಸ್ತದಿಂದ ಶಿವಧ್ವಜವನ್ನು ಹಾರಿಸಿದರು. ಹಾಗೂ ಎಲ್ಲರಿಗೂ ಅಭಿನಂದನೆಗಳನ್ನು ಹೇಳಿದರು. ಇಂದಿನ ದಿನ ಎಲ್ಲರೂ ತಮ್ಮ ಜನ್ಮದಿನದ ಶಭಾಶಯಗಳನ್ನು ಕೊಟ್ಟು ಹಾಗೂ ತೆಗೆದುಕೊಂಡು ಧ್ವಜವನ್ನು ಹಾರಿಸಿದಿರಿ. ಆದರೆ ಆ ದಿನವನ್ನು ಬೇಗನೆ ತರಬೇಕು. ಸ್ಥೂಲ ಭಾವುಟವಂತೂ ನಿಮಿತ್ತ ಮಾತ್ರ ಆದರೆ ಒಂದೊಂದು ಮಗುವಿನ ಮುಖ ಬಾಬಾರವರ ಚಿತ್ರವನ್ನು ತೋರಿಸಲಿ. ಇಂತಹ ಬಾವುಟ ಹಾರಿಸಬೇಕು. ಆ ದಿನವನ್ನು ಬಹಳ ಬಹಳ ಬೇಗನೆ ತರಬೇಕು.

ರಿವೈಸ್ ಕೋರ್ಸ್ 28-02-2003.
***ಸೇವೆಯ ಜೊತೆ ಈಗ ಸಂಪನ್ನರಾಗುವ ಪ್ಲಾನ್ ಮಾಡಿ ಕರ್ಮಾತೀರಾಗುವಂತಹ ಗುಂಗಿನಲ್ಲಿ ತೊಡಗಿರಿ.***

ಪವಿತ್ರತೆ ಎಂದರೆ ಸಂಪೂರ್ಣ ಪವಿತ್ರತೆ, ಕೇವಲ ನಡೆಸುವ ಪವಿತ್ರತೆಯಲ್ಲ, ಸಂಪೂರ್ಣ ಪವಿತ್ರತೆ ಎಂಬುದು ಬ್ರಾಹ್ಮಣ ಜೀವನದ ಬಹುದೊಡ್ಡ ಆಸ್ತಿಯಾಗಿದೆ. ರಾಯಲ್ಟಿ, ವ್ಯಕ್ತಿತ್ವವಾಗಿದೆ. ಆದ್ದರಿಂದಲೇ ಭಕ್ತರೂ ಸಹ ಒಂದು ದಿನಕ್ಕಾಗಿ ಪವಿತ್ರತೆಯ ವ್ರತವನ್ನು ಇಟ್ಟುಕೊಳ್ಳುತ್ತಾರೆ. ಈ ವಿಧವಾಗಿ ನಿಮ್ಮನ್ನೇ ಕಾಪಿ ಮಾಡಿದ್ದಾರೆ. ನಾನು ಏನು ಹೇಳುತ್ತೇನೆಯೋ, ಏನನ್ನಾದರೆ ಮಾಡಿದ್ದೇನೆಯೋ, ಯಾವುದನ್ನಾದರೆ ತಿಳಿದಿದ್ದೇನೆಯೋ ಅದೇ ನಿಜ, ಅದೇ ಆಗಬೇಕು. ಹೀಗೆ ತಿಳಿಯುವುದೇ ಅಭಿಮಾನದ ನಾನು ಎಂಬುದು. ನಾನು ಎಂಬುದು ಪೂರ್ಣವಾಗದಿದ್ದರೆ ಹಿಂತಿರುಗಿ ಅದೇ ಮನಸ್ಸಿನ ಬಲಹೀನತೆಯ ರೂಪದಲ್ಲಿ ಬರುತ್ತದೆ. ನಾನು ಮಾಡಲಾಗುವುದಿಲ್ಲ, ನಾನು ನಡೆಯಲಾಗುವುದಿಲ್ಲ ಹೀಗೆ ಒಂದು ದೆಹಾಭಿಮಾನದ ನಾನು ಎಂಬುದು ಬದಲಾಗಿ ನಾನು ಎಂಬ ಮಾತೇ ಸ್ವಮಾನವನ್ನು ಸಹ ಸ್ಮೃತಿ ಮಾಡಿಸುತ್ತದೆ ಮತ್ತು ನಾನು ಎಂಬ ಮಾತೇ ದೆಹಬಿಮಾನದಲ್ಲಿಯೂ ತರುತ್ತದೆ. ಎನ್ನುತ್ತಾ ಶಿವಪರಮಾತ್ಮ ಸಾಲಿಗ್ರಾಮಗಳಾದ ತನ್ನ ಮಕ್ಕಳೊಂದಿಗೆ ಮಾತನಾಡುತ್ತಿರುವ ಮಹಾ ವಾಕ್ಯಗಳಿಂದ ಆತ್ಮಿಕ ಸ್ಥಿತಿಯಲ್ಲಿದ್ದು ಮನನ ಚಿಂತನೆ ಮಾಡಬೇಕಾಗಿರುವ ಸಮರ್ಥ ಸಂಕಲ್ಪಗಳು.

**ಆತ್ಮಿಕ ಸ್ಥಿತಿ/ಯೋಗ ಸ್ಥಿತಿ.**
ನಾನು ಆತ್ಮ ಪವಿತ್ರ ಸ್ವರೂಪ, ಶಿವ ಪರಮಾತ್ಮ ನನ್ನ ತಂದೆ.

1.ನಾನು ಸಾಲಿಗ್ರಾಮ ಆತ್ಮನಾಗಿದ್ದೇನೆ.

2. ನಾನು ಜನ್ಮವನ್ನು ಪಡೆಯುತ್ತಲೇ ಒಮ್ಮೆ ಪವಿತ್ರತೆಯ, ಆಹಾರ ಪಾನೀಯಗಳ, ಅಜ್ಞಾನದ ನಿದ್ರೆಯಿಂದ ಎಚ್ಚರವಾಗಿರುವ ವ್ರತವನ್ನು ತೆಗೆದುಕೊಂಡಿದ್ದೇನೆ. (ಇದನ್ನೇ ಭಕ್ತರು ಪ್ರತಿ ವರ್ಷಕ್ಕೊಮ್ಮೆ, ಒಂದು ದಿನಕ್ಕಾಗಿ ವ್ರತದಂತೆ ಕಾಪಿ ಮಾಡಿದ್ದಾರೆ.)

3. ನಾನು ಕ್ರೋಧ ಮತ್ತು ಅದರ ಸಹಯೋಗಿಗಳೆಲ್ಲವನ್ನು ಅರ್ಥಾತ್ ಮಹಾಭೂತಗಳನ್ನು ತ್ಯಾಗ ಮಾಡಿದ್ದೇನೆ.

4. ನಾನು ವಿಕಾರಗಳ ಚಿಕ್ಕ ಚಿಕ್ಕ ಅಂಶ ಮಾತ್ರ, ವಂಶಮಾತ್ರವಾಗಿರುವವುಗಳನ್ನು ಸಹ ತ್ಯಾಗ ಮಾಡಿದ್ದೇನೆ.

5. ಪವಿತ್ರತೆ ಬ್ರಾಹ್ಮಣಾತ್ಮನಾದ ನನಗೆ ಎಲ್ಲದಕ್ಕಿಂತಲೂ ಶ್ರೇಷ್ಠ ಶೃಂಗಾರವಾಗಿದೆ, ಸಂಪೂರ್ಣ ಪವಿತ್ರತೆಯೇ ನನ್ನ ಬ್ರಾಹ್ಮಣ ಜೀವನದ ಶ್ರೇಷ್ಠ ಆಸ್ತಿ, ರಾಯಲ್ಟಿ ಮತ್ತು ವ್ಯಕ್ತಿತ್ವವಾಗಿದೆ.

6. ನನಗೆ ದೇಹಾಭಿಮಾನದ ನಾನು ಎಂಬುವುದರ ಬದಲಾಗಿ ನಾನು ಎಂಬ ಮಾತು ಸ್ವಮಾನವನ್ನು ಸ್ಮೃತಿ ಮಾಡಿಸುತ್ತಿದೆ.

7. ನಾನು ತಂದೆಗೆ ಪೂರ್ಣ ಸಮರ್ಪಣೆಯಾಗಿದ್ದೇನೆ.

8. ನಾನು ಚಿಕ್ಕ, ದೊಡ್ಡ ಪಂಚವೀಕಾರಗಳನ್ನು ಬಿಡುತ್ತೇನೆ ಎಂದು ತಂದೆಯೊಂದಿಗೆ ಧೈರ್ಯವಾಗಿ ಪ್ರತಿಜ್ಞೆ ಮಾಡಿದ್ದೇನೆ.

9. ನಾನು ಸೇವೆಯನ್ನು ವೇಗವಾಗಿ ಮಾಡುತ್ತಾ ಸಂಪೂರ್ಣ ಸಮಾಪ್ತಿ ಸಮಯವನ್ನು ಸಮೀಪವಾಗಿ ತಂದಿದ್ದೇನೆ.

10. ನಾನು ಪರಮಾತ್ಮನ ಸಂದೇಶವನ್ನು ಕೊಡುತ್ತಾ ಸಂದೇಶದೊಂದಿಗೆ ಸಂಪೂರ್ಣತೆಯ ತಯಾರಿಗಳನ್ನು ಮಾಡುತ್ತಿದ್ದೇನೆ.

11. ತಂದೆಯ ಪ್ರತ್ಯಕ್ಷತೆ ಆಗಲು ಸ್ಥಾಪನೆಗೆ ನಿಮಿತ್ತವಾದ ನಾನು ಎವರ್ ರೆಡಿಯಾಗಿದ್ದೇನೆ.

12. ನಾನು ಎಂಬ ಮಾತನ್ನು ಸಂಪೂರ್ಣವಾಗಿ ಪರಿವರ್ತನೆ ಮಾಡಿಕೊಂಡು ತಂದೆಯ ಜೊತೆ ಹೋಗುತ್ತಿದ್ದೇನೆ.

13. ನಾನು ಸಂಪನ್ನವಾಗಲು ಪ್ಲಾನ್ ತಯಾರು ಮಾಡಿಕೊಂಡು ಕರ್ಮಾತೀತವಾಗುವ ಸಂದರ್ಭದಲ್ಲಿ ಇಟ್ಟುಕೊಂಡಿದ್ದೇನೆ.

14. ನಾನು ಪ್ರಾಣದಿಂದ, ಬಾಯಾರಿಕೆಯಿಂದ ಕರೆಯುತ್ತಿರುವ ಭಕ್ತರ, ದುಃಖಿ ಆತ್ಮರ ಕರೆಯನ್ನು ಕೇಳುತ್ತಾ ಸಮಯಾನುಸಾರ ಮಾಸ್ಟರ್ ದಯಾಸಾಗರನಾಗಿ ಸ್ವಯಂನ ಮೇಲೆ ಮತ್ತು ಇತರಾತ್ಮರ ಪ್ರತಿಯೂ ಧೈರ್ಯವನ್ನು ತೋರಿಸುತ್ತಿದ್ದೇನೆ.

15. ನಾನು ಲೈಟ್ ಹೌಸ್ ಆಗಿ ವಿಶ್ವದಲ್ಲಿರುವ ಅಪ್ರಾಪ್ತಿ ಆತ್ಮರೆಲ್ಲರಿಗೂ ಪ್ರಾಪ್ತಿಯ ಕಿರಣಗಳನ್ನು ಕೊಡುತ್ತಾ ಭಿನ್ನ-ಭಿನ್ನ ಲೈಟ್ ನ ಕಿರಣಗಳನ್ನು ಸಿಂಪಡಿಸುತ್ತಿದ್ದೇನೆ.